ಕಾಯ್ದಿರಿಸಿದ ಹಣಕ್ಕೆ ಅನುಗುಣವಾಗಿ ಆಯಾ ವರ್ಷದ ವಾಸ್ತವಿಕ ಅಂಕಿ ಅಂಶಗಳ ಆದಾರದ ಮೇರೆಗೆ ಪುನರ್ ನಿಗಧಿಪಡಿಸಿಕೊಂಡು, ವೆಚ್ಚ ಮಾಡಲಾಗುತ್ತಿದೆ.

2000-2001ನೇ ಸಾಲಿನಲ್ಲಿ ಆರ್ಥಿಕ ಪರಿಸ್ಥಿತಿ ಕುಂಠಿತವಾಗಿರುವುದರಿಂದ ನಿಗಧಿಪಡಿಸಿದ ಗುರಿಯಂತೆ ವೆಚ್ಚ ಮಾಡಲು ಸಾಧ್ಯವಾಗಿರುವುದಿಲ್ಲ. ಉಳಿಕೆ ಹಣವನ್ನು ಪ್ರಸ್ತುತ ಸಾಲಿನಲ್ಲಿ ವೆಚ್ಚ ಮಾಡಲು ಕೈಗೊಳ್ಳಲಾಗುತ್ತಿದೆ.

1998-99ರಿಂದ ತುಮಕೂರು ನಗರಸಭೆಗೆ ಬಂದ ಆದಾಯ

2702(3023) ಶ್ರೀ ಶಿವಣ್ಣ ಎಸ್. (ತುಮಕೂರು) :— ಮಾನ್ಯ ಪೌರಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಮಕೂರು ನಗರಸಭೆಗೆ ೧೯೯೮-೯೯, ೧೯೯೯-೨೦೦೦ ಹಾಗೂ ೨೦೦೦-೦೧ನೇ ಸಾಲಿನಲ್ಲಿ ವಿವಿಧ ಮೂಲಗಳಿಂದ ಬಂದ ಆದಾಯವೆಷ್ಟು ; (ಕಂದಾಯ, ಸ್ಟ್ಯಾಂಪ್ ಡ್ಯೂಟಿ, ಸರ್ಕಾರದ ಅನುದಾನ ಇತ್ಯಾದಿ ವರ್ಷವಾರು ಶೀರ್ಷಿಕೆವಾರು ಮಾಹಿತಿ ಒದಗಿಸುವುದು)

ಆ) ಕಂದಾಯದ ಮುಖೇನ ಸರ್ಕಾರ ನಿಗಧಿಪಡಿಸಿದ ರೀತಿ ಶೇಕಡಾವಾರು ತೆರಿಗೆ ವಸೂಲು ಮಾಡಲಾಗಿದೆಯೆ; ಆಯಾಯ ಲೆಕ್ಕ ಶೀರ್ಷಿಕೆಗೆ ತೆರಿಗೆ ಜಮಾ ಮಾಡಲಾಗಿದೆಯೆ; ಮಾಡಿದ್ದಲ್ಲಿ ವರ್ಷವಾರು ಶೀರ್ಷಿಕೆವಾರು ಮಾಹಿತಿ ಒದಗಿಸುವುದು;

ಇ) ಕಂದಾಯದ ಮುಖೇನ ವಸೂಲ್ಮಾಡಿದ ತೆರಿಗೆಯನ್ನು ಕಾಮಗಾರಿಗೆ ಹಾಗೂ ಇತರೆ ಬಾಬಿಗೆ ಖರ್ಚು ಮಾಡಲಾಗಿದೆಯೇ;

ಈ) ಖರ್ಚು ಮಾಡಿದ್ದಲ್ಲಿ ಸರ್ಕಾರದ ಅನುಮತಿ ಪಡೆದುಕೊಳ್ಳಲಾಗಿದೆಯೇ; ಇಲ್ಲವಾದಲ್ಲಿ, ಸರ್ಕಾರದ ತೆರಿಗೆಯನ್ನು ದುರುಪಯೋಗಿಸಿದಂತಾಗುವದಲ್ಲವೇ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಡಳಿತ ರಾಜ್ಯ ಸಚಿವರು) :—

ಅ) ರೂ.೨,೨೭೬.೯೬ ಲಕ್ಷಗಳು

ವಿವರಗಳನ್ನು ಅನುಬಂಧ - 'ಅ'ನಲ್ಲಿ ತೋರಿಸಲಾಗಿದೆ.

ಆ) ವಿವರಗಳನ್ನು ಅನುಬಂಧ - 'ಅ'ನಲ್ಲಿ ತೋರಿಸಲಾಗಿದೆ.

ಇ) ಹೌದು.

ಈ) ಸರ್ಕಾರದ ಅನುಮತಿ ಪಡೆಯಲಾಗಿದೆ.

ಅನುಬಂಧ 'ಎ'

ಕ್ರ.ಸಂ.		೧೯೯೮-೯೯	೧೯೯೯-೨೦೦೦	೨೦೦೦-೦೧	ಒಟ್ಟು
೧.	ನಗರಸಭೆಯ ಕಂದಾಯ ಮತ್ತು ಕರಗಳ ಮೂಲದಿಂದ (ಮನೆ ಕಂದಾಯ, ನೀರಿನ ಕರ ವಿದ್ಯುತ್ ದೀಪದ ಕರ, ನೈರ್ಮಲೀಕರಣ ಕರ, ನೀರಿನ ಕಂದಾಯ ಇತ್ಯಾದಿ	೧೧೯.೪೪	೧೪೮.೨೮	೧೭೦.೮೪	೪೭೩.೫೬
೨.	ವಿಶೇಷ ಮೂಲಗಳಿಂದ ಬರುವ ಆದಾಯ (ಮನರಂಜನಾ ತೆರಿಗೆ ಮೇಲೆ ಪರಿಹಾರ ಧನ, ವಾಹನ ತೆರಿಗೆ ಮೇಲೆ ಪರಿಹಾರ ಧನ) ಅಧಿಭಾರ ಶುಲ್ಕ (ಸ್ಟ್ಯಾಂಪ್ ಡ್ಯೂಟಿ). ೧೯೯೮-೯೯ರ ಬಾಕಿ ಹಣ ೯೯-೨೦೦೦ನೇ ಸಾಲಿನಲ್ಲಿ ಹೋಂದಾಣಿಕೆ ಆಗಿದೆ)	—	೮೫.೧೮	೨೭.೨೦	೧೧೨.೩೩
೩.	ನಗರಸಭೆ ಆಸ್ತಿ ಹಾಗೂ ಅಧಿಕಾರದಿಂದ ಬರುವ ಆದಾಯಗಳು (ಜಮೀನು, ಅಂಗಡಿ ಬಾಡಿಗೆ, ಅಭಿವೃದ್ಧಿ ಶುಲ್ಕ, ಮಾರುಕಟ್ಟೆ ಶುಲ್ಕ ಉದ್ದಿಮೆ ಪರವಾನಗಿ ಇತ್ಯಾದಿ)	೭೭.೦೦	೮೯.೧೩	೭೭.೮೫	೨೪೦.೯೮
೪.	<u>ಸರ್ಕಾರದ ಅನುದಾನಗಳು :</u>				
	(೧) ಎಸ್.ಎಫ್.ಸಿ. (ಅಭಿವೃದ್ಧಿ ಅನುದಾನ)	೨೨.೦೦		೧೮.೭೫	೪೦.೭೫
	(೨) ಎಸ್.ಎಫ್.ಸಿ. (ವೇತನ ಅನುದಾನ)	೧೨೨.೪೬	೧೪೧.೪೦	೨೧೪.೧೬	೫೨೨.೪೬
	(೩) ೧೦ನೇ ಹಣಕಾಸು ಯೋಜನೆಯಡಿ ಅನುದಾನ	೧೪.೦೦	೧೨.೦೦	೩೪.೭೨	೭೪.೭೨
	(೪) ಸಂಸತ್ ಸದಸ್ಯರ ಪ್ರವೇಶಾಭಿವೃದ್ಧಿ ಅನುದಾನ	೧೦.೦೦	—	೦೪.೪೦	೧೪.೪೦

ಕ್ರ.ಸಂ.	೧೯೯೮-೯೯	೧೯೯೯-೨೦೦೦	೨೦೦೦-೦೧	ಒಟ್ಟು
೫. ಎಸ್.ಎಫ್.ಸಿ. ಅನುದಾನದ ಪೈಕಿ				
(೧) ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮಕ್ಕೆ ಹೊದಾಣಿಕೆ ಆದ ಬಗ್ಗೆ	೭೨.೧೫	೧೧೬.೨೭	೧೬೭.೯೪	೩೫೬.೩೬
(೨) ಕರ್ನಾಟಕ ನಗರ ನೀರು ಸರಬರಾಜು ಮಂಡಳಿಗೆ ಹೊದಾಣಿಕೆ ಆದ ಬಗ್ಗೆ	೬೮.೭೨	೨೬೧.೧೫	೭೬.೯೯	೪೦೬.೮೬
೬. ಇತರೆ ಬಾಬುಗಳು				
(೧) ಕರಗಳ ವಸೂಲಿಯ ಸಂಗ್ರಹಣ ಶುಲ್ಕ ಇತ್ಯಾದಿ	೦.೩೦	೦.೨೭	೨.೧೮	೨.೭೯
(೨) ಭಾಗ-೩ ಅಮಾನತ್ ಪಾತೆಗಳು (ನೆಸ್‌ಗಳ ವಸೂಲಾತಿ- ಆರೋಗ್ಯ, ವಿದ್ಯಾಭ್ಯಾಸ, ಗ್ರಂಥಾಲಯ ಮತ್ತು ನೀರಿನ ಕರ	೨೯.೧೬	೨೬.೩೦	೨೬.೪೬	೮೧.೯೩
ಒಟ್ಟು	೫೩೯.೨೩	೯೧೨.೩೩	೮೨೯.೪೦	೨೨೭೬.೯೬

ಅನುಬಂಧ 'ಆ'

ಕ್ರ.ಸಂ.	ಕರಗಳು	ಲೆಕ್ಕ ಶೀರ್ಷಿಕೆ	೧೯೯೮-೯೯	೧೯೯೯-೨೦೦೦	೨೦೦೦-೨೦೦೧	ಒಟ್ಟು
೧	ಆರೋಗ್ಯ ಕರ	೦೨೧೦	೨,೧೧,೭೮	೧,೮೨,೭೪೭	೯,೫೨೧೩.೨	೧೩,೪೬,೬೬೨
೨	ವಿದ್ಯಾಭ್ಯಸದ ಕರ	೦೨೦೨	೧,೨೩,೪೬೯	೧,೪೦.೩೪೦	೬,೪೧,೧೮೬	೯,೦೪,೯೯೫
೩	ಗ್ರಂಥಾಲಯ ಕರ	೧೨೯೫೬	೧,೯೪,೮೪೦	೭೭,೧೬೯	೩,೮೩,೬೮೫	೬,೧೫,೬೯೪
೪	ಸ್ಥಳ ಸುಂ	--	೪೨,೩೨೦	೩೭,೦೩೫	೨೯,೧೩೨	೧,೦೮,೩೯೭
		ಒಟ್ಟು	೫೫೩.೨,೨೯೧	೪,೩೭,೨೯೧	೨೦,೦೬,೧೩೫	೨೯,೭೯,೭೪೮